# ಕರ್ನಾಟಕ ಸರ್ಕಾರದ ನಡವಳಿ

**ವಿಷಯ:** ಶ್ರೀ ನಟರಾಜ್. ಎ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಸಿ.ಕೆ.ಪುರ ಗ್ರಾಮ ಪಂಚಾಯಿತಿ, ಪಾವಗಡ ತಾಲ್ಲೂಕು, ತುಮಕೂರು ಜಿಲ್ಲೆ ಇವರ ವಿರುದ್ಧ ನಡೆಸಲಾದ ಇಲಾಖಾ ವಿಚಾರಣೆ-ಅಂತಿಮ ಆದೇಶ ಹೊರಡಿಸುವ ಬಗ್ಗೆ.

**ಓದಲಾಗಿದೆ:**

1. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/395/ಗ್ರಾಪಂಕಾ/2017 ದಿನಾಂಕ:16.05.2017.
2. ಅಪರ ನಿಬಂಧಕರು, ವಿಚಾರಣೆಗಳು-15, ಕರ್ನಾಟಕ ಲೋಕಾಯುಕ್ತ ಬೆಂಗಳೂರು ಇವರು ಮಾನ್ಯ ಉಪಲೋಕಾಯುಕ್ತರಿಗೆ ಸಲ್ಲಿಸಿದ ವಿಚಾರಣಾ ವರದಿ ಸಂಖ್ಯೆ:UPLOK-2/DE/808/ 2017/ARE-15, Date:21.01.2019.
3. ಮಾನ್ಯ ಉಪಲೋಕಾಯುಕ್ತರು ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಶಿಫಾರಸ್ಸು ಸಂಖ್ಯೆ: UPLOK-2/DE/808/2017/ARE-15, Date:24.01.2019.
4. ಸರ್ಕಾರದ ಎರಡನೇ ಕಾರಣ ಕೇಳುವ ನೋಟೀಸ್ ಸಂಖ್ಯೆ: ಗ್ರಾಅಪ:08:ಗ್ರಾಪಂಕಾ:2017 ದಿನಾಂಕ:07.02.2019.
5. ಆಪಾದಿತ ನೌಕರರು ಎರಡನೇ ಕಾರಣ ಕೇಳುವ ನೋಟೀಸ್‌ಗೆ ಸಲ್ಲಿಸಿರುವ ಸಮಜಾಯಿಷಿ ದಿನಾಂಕ: 18.05.2019.

**ಪ್ರಸ್ತಾವನೆ :**

ಮೇಲೆ ಓದಲಾದ ಕ್ರಮ ಸಂಖ್ಯೆ: (1) ರಲ್ಲಿನ ಸರ್ಕಾರದ ಆದೇಶದಲ್ಲಿ ಶ್ರೀ ನಟರಾಜ್.ಎ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಸಿ.ಕೆ.ಪುರ ಗ್ರಾಮ ಪಂಚಾಯಿತಿ, ಪಾವಗಡ ತಾಲ್ಲೂಕು, ತುಮಕೂರು ಜಿಲ್ಲೆ ಇವರ ವಿರುದ್ಧ ಹಣ ದುರುಪಯೋಗದ ಆರೋಪದ ಮೇಲೆ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957 ರ ನಿಯಮ 14-ಎ ಅಡಿಯಲ್ಲಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸಲಾಗಿತ್ತು. ಅದರಂತೆ ಅಪರ ನಿಬಂಧಕರು ವಿಚಾರಣೆಗಳು-15, ಕರ್ನಾಟಕ ಲೋಕಾಯುಕ್ತ ಇವರು ಶ್ರೀ. ನಟರಾಜ್ ರವರ ವಿರುದ್ಧ ಈ ಕೆಳಕಂಡ ಆರೋಪದ ಮೇಲೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957 ರ ನಿಯಮ 11ರ ಅಡಿಯಲ್ಲಿ ಇಲಾಖಾ ವಿಚಾರಣೆ ನಡೆಸಿರುತ್ತಾರೆ.

**ದೋಷಾರೋಪಣೆ"**

"ನೀವು / ಆಪಾದಿತ ಸರ್ಕಾರಿ ನೌಕರರಾದ ಶ್ರೀ. ನಟರಾಜ್ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಆದ ನೀವು ಸಿಕೆ ಪುರ ಗ್ರಾಮ ಪಂಚಾಯತ್ ಸಬಂಧಪಟ್ಟಂತೆ ಜನ ಸಾಮಾನ್ಯರಿಗೆ ನೀರು. ಸರಬರಾಜು ಮಾಡುವ ಉದ್ದೇಶದಿಂದ ಅವಶ್ಯಕ ಸಾಮಗ್ರಿಗಳನ್ನು ಶ್ರೀ ನರೇಶ್ ಬಾಬು ರವರಿಗೆ ಸಂಬಂಧಿಸಿದ ಅತ್ಲೂರು ಹಾರ್ಡ್‌ವೇರ್ ಅಂಗಡಿಯ ಮೂಲಕ ಖರೀದಿಸಿದ್ದು, ಈ ಬಗ್ಗೆ ದಿನಾಂಕ:21.12.2014 ರಂದು ಕಾವೇರಿ ಗ್ರಾಮೀಣ ಬ್ಯಾಂಕ್ ಶಾಖೆಯ ಚೆಕ್ ನಂ.002095ನ್ನು ರೂ.45,000/- ಮತ್ತು ದಿನಾಂಕ:24.09.2014 ರಂದು ಕಾವೇರಿ ಗ್ರಾಮೀಣ ಬ್ಯಾಂಕ್ ಶಾಖೆಯ ಚೆಕ್ ನಂ.002094ನ್ನು ರೂ.50,000/- ಗಳಿಗೆ ನೀಡಿದ್ದು, ಸದರಿ ಚೆಕ್‌ಗಳಿಗೆ ನೀವು-ಆಪಾದಿತ ಸರ್ಕಾರಿ ನೌಕರರು ಮತ್ತು ಅಂದಿನ ಪಂಚಾಯತ್ ಅಧ್ಯಕ್ಷರಾದ ಶ್ರೀಮತಿ ಹನುಮಕ್ಕ ರವರು ಸಹಿ ಮಾಡಿದ್ದು, ಆದರೆ ಸದರಿ ಚೆಕ್‌ಗಳ ಮೇಲೆ ರೂ.45,000/-ಕ್ಕೆ ಬದಲು 1,45,000/- ಮತ್ತು ರೂ.50,000/- ಕ್ಕೆ ಬದಲು ರೂ.1,50,000/-ಗಳೆಂದು ತಿದ್ದುಪಡಿ ಮಾಡಿ, ಹಣ ಡ್ರಾ ಮಾಡಿ ದುರುಪಯೋಗಪಡಿಸಿಕೊಂಡು ಕರ್ತವ್ಯಲೋಪವೆಸಗಿ ಸರ್ಕಾರಿ ನೌಕರರಿಗೆ ಉಚಿತವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆಯಿಂದ

[illegible] ರ ನಿಯಮ 3(1) (i) ರಿಂದ (iii) ರಡಿಯಲ್ಲಿ ದುರ್ನಡತೆಯನ್ನೆಸಗಿದ್ದಿರಿ.

ವಿಚಾರಣಾಧಿಕಾರಿಯವರು ಮೇಲೆ ಓದಲಾದ ಕ್ರಮ ಸಂಖ್ಯೆ: (2) ರಲ್ಲಿ ಮಾನ್ಯ ಉಪಲೋಕಾಯುಕ್ತರಿಗೆ ಸಲ್ಲಿಸಿದ ವಿಚಾರಣಾ ವರದಿಯಲ್ಲಿ ಆಪಾದಿತರ ವಿರುದ್ಧದ ಆರೋಪವು ಸಾಬೀತಾಗಿರುವುದಾಗಿ ನಿರ್ಣಯಿಸಿರುತ್ತಾರೆ. ಮಾನ್ಯ ಉಪಲೋಕಾಯುಕ್ತರು ವಿಚಾರಣಾ ವರದಿಯನ್ನು ಅಂಗೀಕರಿಸಿ ಸಾಬೀತಾದ ಆರೋಪಕ್ಕೆ ಅನುಗುಣವಾಗಿ ಶ್ರೀ. ನಟರಾಜ್‌ರವರಿಗೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮ 1957 ರ ನಿಯಮ 8 (vi) ರಡಿ ನಿರ್ದಿಷ್ಟಪಡಿಸಿದಂತೆ **"ಸೇವೆಯಿಂದ ಕಡ್ಡಾಯ ನಿವೃತ್ತಿಗೊಳಿಸುವ"** ದಂಡನೆ ವಿಧಿಸಲು ಮೇಲೆ ಕ್ರಮ ಸಂಖ್ಯೆ (3) ರಲ್ಲಿ ಓದಲಾದ ವರದಿಯಲ್ಲಿ ಸರ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತಾರೆ.

ಸರ್ಕಾರವು ಮೇಲೆ ಓದಲಾದ ಕ್ರಮ ಸಂಖ್ಯೆ (4) ರಲ್ಲಿ ಶ್ರೀ ನಟರಾಜ್, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಸಿ.ಕೆ.ಪುರ ಗ್ರಾಮ ಪಂಚಾಯಿತಿ, ಪಾವಗಡ ತಾಲ್ಲೂಕು, ತುಮಕೂರು ಜಿಲ್ಲೆ ಇವರಿಗೆ ನಿಯಮಾನುಸಾರ ವಿಚಾರಣಾಧಿಕಾರಿಯವರ ವರದಿ ಮತ್ತು ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸಿನ ಪ್ರತಿಯೊಂದಿಗೆ ಎರಡನೇ ಕಾರಣ ಕೇಳುವ ನೋಟೀಸನ್ನು ಜಾರಿಗೊಳಿಸಿದ್ದು ಇದಕ್ಕೆ ಸಂಬಂಧಿಸಿದಂತೆ ಶ್ರೀ. ನಟರಾಜ್ ರವರು ಮೇಲೆ ಓದಲಾದ ಕ್ರಮ ಸಂಖ್ಯೆ (5) ರಲ್ಲಿ ಎರಡನೇ ಕಾರಣ ಕೇಳುವ ನೋಟೀಸಿಗೆ ಸಲ್ಲಿಸಿರುವ
ಸಮಜಾಯಿಷಿಯ ಪ್ರಮುಖ ಅಂಶಗಳು ಈ ಕೆಳಕಂಡಂತಿರುತ್ತವೆ.

- ಸಿ.ಕೆ.ಪುರ ಗ್ರಾಮ ಪಂಚಾಯತಿಯ ಲೆಕ್ಕ ಸಹಾಯಕರ ಹುದ್ದೆಗೆ ವಿಕಲಚೇತನರ ಖೋಟಾದಡಿ ಲೆಕ್ಕ ಸಹಾಯಕರಾಗಿ ಆಯ್ಕೆ ಹೊಂದಿರುವವರು ಅಂಧ ಅಂಗವಿಕಲರಾಗಿರುತ್ತಾರೆ. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 378 ಗ್ರಾಪಂಅ 2012, ದಿನಾಂಕ: 13.08.2012ರಲ್ಲಿ ಗ್ರಾಮ ಪಂಚಾಯತಿಯಲ್ಲಿ ನೌಕರರುಗಳಿಗೆ ಕಾರ್ಯಹಂಚಿಕೆ ಮಾಡಲಾದ್ದು, ಅದರಂತೆ ಸದರಿ ಲೆಕ್ಕ ಸಹಾಯಕರು ನಿರ್ವಹಿಸಿರುವ ಕಾರ್ಯದಲ್ಲಿ ತಪ್ಪಾಗಿದ್ದು, ಇದರಲ್ಲಿ ಉಂಟಾಗಿರುವ ಲೋಪದೋಷವನ್ನು ಕಂಡುಹಿಡಿಯಲು ವಿಳಂಬವಾಗಿರುತ್ತದೆ.
- ಸಿ.ಕೆ.ಪುರ ಗ್ರಾಮ ಪಂಚಾಯತಿಯು ನೀರಿನ ಸರಬರಾಜು ಮಾಡಲು ಬೇಕಾದ ಸಾಮಗ್ರಿ ಸಂಬಂಧ ಅತ್ಲೂರು ಹಾರ್ಡ್‌ವೇರ್ ಷಾಪ್ ಮಾಲಿಕರಾದ ಶ್ರೀ ನರೇಶ್ ಬಾಬು ಎ.ಎನ್. ರವರಿಗೆ ದಿನಾಂಕ: 29.04.2014ರಂದು ಚೆಕ್ ನಂ.002094ನ್ನು ರೂ. 50,000/-ಗಳಿಗೆ ಮತ್ತು ದಿನಾಂಕ: 26.09.2014ರಂದು ಚೆಕ್ ನಂ.002095ನ್ನು ರೂ 45,000/- ಗಳಿಗೆ ನೀಡಲಾಗಿತ್ತು. ಆದರೆ ಅತ್ಲೂರು ಹಾರ್ಡ್‌ವೇರ್ ಷಾಪ್ ಮಾಲಿಕರಾದ ಶ್ರೀ ನರೇಶ್ ಬಾಬು ರವರು 45,000/-ಕ್ಕೆ ಬದಲಾಗಿ, 1,45,000/- ಮತ್ತು 50,000/-ಕ್ಕೆ ಬದಲು 1,50,000/- ಗಳೆಂದು ತಿದ್ದುಪಡಿ ಮಾಡಿ ಹಣ ಡ್ರಾ ಮಾಡಿಕೊಂಡು ದುರುಪಯೋಗಪಡಿಸಿಕೊಂಡಿರುತ್ತಾರೆ.
- ದಿನಾಂಕ: 03.01.2015ರಂದು ಪಾಸ್ ಬುಕ್‌ನ್ನು ಪರಿಶೀಲಿಸಿದಾಗ ಫೋರ್ಜರಿ ಮಾಡಿರುವುದು ಕಂಡುಬಂದಿದ್ದು, ಈ ಬಗ್ಗೆ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿರವರಿಗೆ ದಿನಾಂಕ: 06.01.2015ರಂದು ವರದಿ ಸಲ್ಲಿಸಿರುತ್ತೇನೆ.
- ಸದರಿ ಪ್ರಕರಣವನ್ನು ದಿನಾಂಕ: 07.02.2015ರಲ್ಲಿ ನಡೆದ ಗ್ರಾಮ ಪಂಚಾಯತಿ ಸಭೆಯಲ್ಲಿ ಚರ್ಚಿಸಲಾಯಿತು. ಸಭೆಯಲ್ಲಿ ಅತ್ಲೂರು ಹಾರ್ಡ್‌ವೇರ್‌ನ ಮಾಲಿಕರಾದ ಶ್ರೀ ನರೇಶ್ ಬಾಬು ಎ.ಎನ್. ರವರು ಚೆಕ್‌ಗಳನ್ನು ತಿದ್ದುಪಡಿ ಮಾಡಿ ಹಣ ಡ್ರಾ ಮಾಡಿರುವುದನ್ನು ಒಪ್ಪಿಕೊಂಡು, ಹಣವನ್ನು ತುಂಬಿ ಕ್ಷಮಾಪಣೆ ಕೋರಿದ ಮೇಲೆ ಈ ವಿಷಯವನ್ನು ಮುಂದುವರೆಸುವುದು ಬೇಡ ಹಾಗೂ ಇಲ್ಲಿಗೆ ಸಮಾಪ್ತಿ ಮಾಡೋಣ ಎಂದು ಸೂಚಿಸಿರುತ್ತಾರೆ ಹಾಗೂ ಸದರಿ ಕ್ಷಮಾಪಣಾ ಪತ್ರವನ್ನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ತುಮಕೂರು ಮತ್ತು ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಪಾವಗಡ ರವರಿಗೆ ಮಾಹಿತಿಯನ್ನು ಕಳುಹಿಸಲಾಗಿದೆ.

- ದಿನಾಂಕ: 06.01.2015 ಮತ್ತು 09.01.2015 ರಂದು ಕಾರ್ಯನಿರ್ವಾಹಕ [illegible] ತಾಲ್ಲೂಕು ಪಂಚಾಯಿತಿ, ಪಾವಗಡ ಇವರು ಬರೆದಿರುವ ಪತ್ರಗಳು ನಕಲಿಯಾಗಿರುತ್ತವೆ. ವಿಚಾರಣಾಧಿಕಾರಿಯವರು ಈ ಪತ್ರಗಳ ಬಗ್ಗೆ ಕಾರ್ಯನಿರ್ವಾಹಕ ಅಧಿಕಾರಿಗಳನ್ನು ವಿಚಾರಣೆ ಮಾಡಿರುವುದಿಲ್ಲ. ಮತ್ತು ಈ ದಾಖಲೆಗಳನ್ನು ಎಕ್ಸಿಬಿಟ್ ಎಂದು ಗುರುತಿಸಿರುವುದಿಲ್ಲ.
- ಮಾನ್ಯ ಉಪಲೋಕಾಯುಕ್ತರಿಗೆ ದಂಡನೆಯನ್ನು ಶಿಫಾರಸ್ಸು ಮಾಡಲು ಅಧಿಕಾರವಿರುವುದಿಲ್ಲ. ಆದ್ದರಿಂದ ಮಾನ್ಯ ಉಪಲೋಕಾಯುಕ್ತರು ಮಾಡಿರುವ ದಂಡನೆಯ ಶಿಫಾರಸ್ಸನ್ನು ಕೈಬಿಟ್ಟು ತಮಗೆ ನ್ಯಾಯ ಒದಗಿಸುವಂತೆ ಕೋರಿರುತ್ತಾರೆ.

ಮೇಲಿನ ಅಂಶಗಳಿಗೆ ಸಂಬಂಧಪಟ್ಟಂತೆ ವಿಚಾರಣಾವರದಿಯನ್ನು ಕುಲಕುಂಷವಾಗಿ ಪರಿಶೀಲಿಸಲಾಗಿದೆ. ವಿಚಾರಣಾಧಿಕಾರಿಯವರು ತಮ್ಮ ವರದಿಯ ಕಂಡಿಕೆ 23 ರಿಂದ 32 ರಲ್ಲಿ ಆಪಾದಿತರ ವಿರುದ್ಧದ ಆರೋಪವು ಸಾಬೀತಾಗಿದೆ ಎಂದು ನಿರ್ಣಯಿಸಲು ಈ ಕೆಳಕಂಡ ಕಾರಣಗಳನ್ನು ನೀಡಿರುತ್ತಾರೆ.

Though the DGO., admits that two cheques given to the Proprietor of the Athlur Hardware were manipulated by the said Proprietor yet from the mere evidence of PW-1 and on perusal of Ex P-4 cheques, Bank Statement etc., it is difficult to gather that the Proprietor of the Athlur Hardware shop has Siphoned off a sum of Rs.2/- lakhs belonging to the Grama Panchayath by way of forging the cheques with the active connivance of the DGO., without there being any corroborative or supplementary evidence to substantiate the same. However, if one carefully looks into the contents of the Two cheques marked as Ex P-4 and particularly if one looks into amount written by the DGO., who was the drawer of the cheques, leaving sufficient space and scope to prefix one lakh to it. Had the DGO., written those amount in workds and figures to the extreme left side of the margin, then there would not have any space left behind those workds and figures giving scope for the Proprietor to prefix Rs. One lakh to it. The DGO, being responsible officer cannot seek to say that he did not know how to write the cheque. Therefore, the way in which the cheques are written gives rise to doubt about the integrity of the DGO.,

Be that as it may, the learned Presenting Officer in order to prove the charge in the course of her reply argument, drew the attention of this office to a letter dated: 06-01-2015 and one more letter dated: 09-01-2015 wherein lot of incriminating materials can be gathered against the DGO.

The last two lines of the letter dated: 06-01-2015 shows that though Grama Panchayath members raised alarm in front of the Athlur Hardware Shop, the DGO., was not present there and also got his mobile phone switched off and thereby remained incommunicado.

Further a glance of the contents of another letter dated: 09-01-2015 shows that though Executive Officer of Taluk Panchayath had called upon the DGO., to furnish all the details of the transaction entered into by him with the Proprietor of Athlur Hardware Shop, yet, DGO., failed

to do so and also did not lodge any Police complaint against the Proprietor even though he was directed to do so by the Executive Officer. All these shortcomings on the part of the DGO., observed in the backdrop of his mischief in writing the cheques gives rise to an unrebuttable presumption that the DGO., by hand-in-glove with the Proprietor of Athlur Hardware tried to swindle a sum of Rs.2/- lakhs belonging to the Grama Panchayath by manipulating the cheques. That is the reason why he did not try to lodge Police complaint against the Proprietor.

Further a Question arises as to whether these two letters reproduced supra which ought to have been marked by the Presenting Officer in the course of evidence or at least confronted to DGO., at the time of his Cross-examination can be relied upon to arrive at a finding. Just because the Presenting Officer has failed to bring those two letters in evidence the DGO., should not be allowed to encash the same to his benefit and thus go scot free when there is sufficient evidence borne on record pinpointing towards is guilt. For all these reasons I answer this point in the affirmative.

28. Point No:2 In proof of this point DGO., has got himself examined as DW-1 by wasy of Affidavit and has got marked EX D-1 tp 4(a).

29. In his Examination-in-chief DGO., has reiterated his Written Statement version filed Under Rule 11 sub-rule (16) and that apart, at para-10 of his Examination-in-chief states that although he had been to the Pavagada Police Station to lodge complaint against the Proprietor of Athlur Hardware the Police refused to register the complaint against him on the ground that it was an internal matter of grama Panchayath. Ground that it was an internal matter of Grama Panchayath.

- (i) Ex D-1 is the letter dated: 06.01.2015 written by DGO., to the Executive Officer of the Pavagada Taluk Panchayath.
- (ii) Ex D-2 is the resolution dated:07.02.2015 passed by the C.K. Pura Grama Panchayath.
- (iii) Ex D-3 is an undated letter purported to have been written by the Proprietor to the DGO.,
- (iv) Ex D-4 is the letter dated: 13.02.2015 written by the DGO., to the Executive Officer of Pavagada Taluk Panchayath.
- (v) Ex D-4 (a) is the Bank challan to show that the sum of Rs.2/- lakhs has been remitted back by the Properitor.

30. Though with these documents DGO., wasn't to project that he has noting to do with the fraud said to have been committed by the Proprietor, yet, those documents by themselves will not prove his innocence in as much as DGO., has not chosen to examine the Executive Officer of the Pavagada Taluk Panchayath to prove Ex D-1, or Ex D-4

and this is particularly so when the Executive Officer had written letters stated supra to the DGO.

31. Though Ex-D-4 (a) Bank challans for having remitted back Rs. 2/- lakhs to the Account of Grama Panchayath, Ex D-3 letter purported to have been written by the Proprietor to the DGO.. have been produced by the DGO., yet these documents perse do not prove the innocence of the DGO., in as much as the proprietor has not been examined by the DGO. This is because the chances of the DGO, himself remitting Rs.2/- Lakhs as per Ex D-4 (a) and also himself creating Ex D-3 for self-serving his case canno be ruled out. Moreover the charge is not about non remitting of Rs. 2/- lakhs by the proprietor and on the other hand, it is about DGO., colluding with the Proprietor and about not taking any action against the Proprietor. When the charge is to that effect, then nothing maters, whether the Proprietor had or had not remitted back the swindled money.

32. Further the defense of he DGO., that because Grama Panchayath passed resolution on 07.02.2015 as per Ex D-2 not to initiate any action against the Proprietor he did not take any action agasint the Proprieto also cannot be believed in as much as, as per letter dated: 09.01.2015 morefully described above, even before Grama Panchayath Passing the resolution, DGO., was called upon by the Executive Officer of Pavagada Taluk Panchayath to lodge Police Complaint against the Proprietor. When such was the case it is not forthcoming as to what made the DGO., not to lodge Police complaint against the proprietor. Therefore it follows as aruge3d by the learned presenting officer, that Ex D-2 resolution must have been got passed in the Grama Panchayath just to overcome the present enquiry and therefore the said Ex D-2 does not absolve the DGO., of the blemish he is charged with. Therefore, I am of the opinion that DGO., has failed to prove his defense. Hence and for the reasons discussed in point NO.1 I answer this point in the negative.

ಸರ್ಕಾರವು ಆಪಾದಿತರು 2ನೇ ಕಾರಣ ಕೇಳುವ ನೋಟೀಸಿಗೆ ನೀಡಿರುವ ಲಿಖಿತ ಹೇಳಿಕೆ, ವಿಚಾರಣಾ ವರದಿ, ವಿಚಾರಣಾ ನಡವಳಿ, ದಾಖಲೆಗಳು ಮತ್ತು ಸಾಕ್ಷ್ಯಾಧಾರಗಳನ್ನು ವಿವರವಾಗಿ ಪರಿಶೀಲಿಸಿದೆ. ಶ್ರೀ ನಟರಾಜು, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಸಿ.ಕೆ.ಪುರ ಗ್ರಾಮ ಪಂಚಾಯಿತಿ, ಪಾವಗಡ ತಾಲ್ಲೂಕು, ತುಮಕೂರು ಜಿಲ್ಲೆ ಇವರು ತಮ್ಮ ಹೇಳಿಕೆಯಲ್ಲಿ ಪ್ರಮುಖವಾಗಿ ಅತ್ತೂರು ಹಾರ್ಡ್‌ವೇರ್ ಷಾಪ್ ಮಾಲಿಕರಾದ ಶ್ರೀ ನರೇಶ್ ಬಾಬು ಎ.ಎನ್. ರವರು ಚೆಕ್‌ಗಳನ್ನು ತಿದ್ದುಪಡಿ ಮಾಡಿ ಹಣ ಡ್ರಾ ಮಾಡಿರುವುದಾಗಿ ತಿಳಿಸಿರುತ್ತಾರೆ ಆದರೆ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಅತ್ತೂರು ಹಾರ್ಡ್‌ವೇರ್ ಷಾಪ್ ಮಾಲಿಕರಾದ ಶ್ರೀ ನರೇಶ್ ಬಾಬು ಎ.ಎನ್. ರವರ ವಿರುದ್ಧ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಪಾವಗಡ ರವರು ದಿನಾಂಕ:09.01.2015 ರಲ್ಲಿ ತಿಳಿಸಿರುವಂತೆ ಯಾವುದೇ ಕ್ರಮಕೈಗೊಂಡಿರುವುದಿಲ್ಲ. ವಿಚಾರಣಾ ವರದಿಯಲ್ಲಿನ ಕಂಡಿಕೆ 15 ರಲ್ಲಿ ಮಂಡನಾಧಿಕಾರಿಯವರು ನೀಡಿರುವ ಹೇಳಿಕೆಯ ಅನುಸಾರ ಆಪಾದಿತರು ಕೈಗೊಂಡಿರುವ ಕ್ರಮಗಳು ಪತ್ರಿಕೆಯಲ್ಲಿ ಪ್ರಕಟವಾದ ವರದಿಯ ನಂತರದ ಕ್ರಮಗಳಾಗಿರುವುದು ಕಂಡುಬರುತ್ತದೆ. ಪತ್ರಿಕಾ ವರದಿಯು ದಿನಾಂಕ: 06.01.2015 ರಂದು ಪ್ರಕಟವಾಗಿರುತ್ತದೆ. ಆದರೆ ಪಾಸ್‌ಬುಕ್ ಎಂಟ್ರಿ ಅನುಸಾರ ದಿನಾಂಕ: 03.01.2015 ರಂದೇ ತಮ್ಮ ಗಮನಕ್ಕೆ ಬಂದಿರುವುದಾಗಿ ಆಪಾದಿತರು ಹೇಳಿಕೆ ಸಲ್ಲಿಸಿರುತ್ತಾರೆ. ಆದರೆ ಈ ಪ್ರಕರಣದ ನಡವಳಿಗಳನ್ನು ಗಮನಿಸಿದಾಗ ಆಪಾದಿತರು ತಮ್ಮ ರಕ್ಷಣೆಗೆ ಬೇಕಾದ ಹಾಗೆ ಕ್ರಮಗಳನ್ನು ಜರುಗಿಸಿರುವುದು ಕಂಡುಬರುತ್ತದೆ.

[illegible] ಉಪಲೋಕಾಯುಕ್ತರಿಗೆ ದಂಡನೆ ಶಿಫಾರಸ್ಸು [illegible] ಎಂದು ಆಪಾದಿತರು ಸಲ್ಲಿಸಿರುತ್ತಾರೆ. ಈ ಸಂಬಂಧ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957 ರ ನಿಯಮ 14 ಎ (ಡಿ) ಮತ್ತು (ಇ) ಈ ಕೆಳಕಂಡಂತಿದೆ.

> (d) After the inquiry is completed, the record of the case along with the findings of the Inquiring Officer and the recommendation of the Lokayukta or the Upalokayukta, as the case may be, shall be sent to the Government.
>
> (e) On receipt of the record under clause (d) the Government shall take action in accordance with the provisions of 1[xxx] rule 11A and in all such cases the Government shall be the Disciplinary Authority competent to impose any of the penalties specified in rule 8.

ಅದರಂತೆ ಮಾನ್ಯ ಉಪಲೋಕಾಯುಕ್ತರು ತಮ್ಮ ಶಿಫಾರಸ್ಸಿನಂತೆ ಸರ್ಕಾರಕ್ಕೆ ವರದಿ ಸಲ್ಲಿಸಬೇಕಾಗಿದ್ದು ದಂಡನೆಯ ಪ್ರಮಾಣವನ್ನು ಸೂಚಿಸಬಾರದೆಂದು ಸದರಿ ನಿಯಮದಲ್ಲಿ ಕಂಡುಬರುವುದಿಲ್ಲ. ಆದಾಗ್ಯೂ ವಿಚಾರಣಾ ವರದಿಯ ಮೇಲೆ ಸರ್ಕಾರವು ಸ್ವತಂತ್ರವಾಗಿ ನಿರ್ಧಾರ ತೆಗೆದುಕೊಳ್ಳಬೇಕಾಗಿದ್ದು ಅದರಂತೆ ಸರ್ಕಾರವು ಪ್ರಕರಣವನ್ನು ಪರಿಶೀಲಿಸಿದೆ. ಶ್ರೀ. ನಟರಾಜ್ ರವರು ಗ್ರಾಮ ಪಂಚಾಯಿತಿಯಲ್ಲಿ ಸರ್ಕಾರವ ಪರವಾದ ಒಬ್ಬ ಅಧಿಕಾರಿಯಾಗಿದ್ದು ಸರ್ಕಾರದ ಹಣ ದುರುಪಯೋಗವಾಗದಂತೆ ನೋಡಿಕೊಳ್ಳುವುದು ಅವರ ಜವಾಬ್ದಾರಿಯಾಗಿರುತ್ತದೆ. ಆದರೆ ಈ ಪ್ರಕರಣದಲ್ಲಿ ಅವರು ಸಾಮಗ್ರಿ ಸರಬರಾಜುದಾರರ ಜೊತೆ ಶಾಮೀಲಾಗಿ ಸರ್ಕಾರದ ಹಣವನ್ನು ಅಕ್ರಮವಾಗಿ ದುರುಪಯೋಗಪಡಿಸಿಕೊಳ್ಳಲು ಪ್ರಯತ್ನಿಸಿರುವುದು ಕಂಡುಬರುತ್ತದೆ. ಆದುದರಿಂದ ಶ್ರೀ. ನಟರಾಜ್ ರವರು ಸರ್ಕಾರದ ಎರಡನೇ ಕಾರಣ ಕೇಳುವ ನೋಟೀಸಿಗೆ ಸಲ್ಲಿಸಿರುವ ಲಿಖಿತ ಹೇಳಿಕೆಯನ್ನು ತಿರಸ್ಕರಿಸಿದೆ.

ಈ ಹಿನ್ನೆಲೆಯಲ್ಲಿ ಸರ್ಕಾರವು ವಿಚಾರಣಾ ವರದಿಯನ್ನು ಅಂಗೀಕರಿಸಿದೆ. ಮತ್ತು ಶ್ರೀ. ನಟರಾಜ್ ರವರ ವಿರುದ್ಧ ಸಾಬೀತಾಗಿರುವ ಆರೋಪಕ್ಕೆ ಅನುಗುಣವಾಗಿ ಮಾನ್ಯ ಉಪಲೋಕಾಯುಕ್ತರು ಶಿಫಾರಸ್ಸು ಮಾಡಿರುವಂತೆ ಅವರಿಗೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957 ರ ನಿಯಮ 8 (vi) ರನ್ವಯ **"ಸೇವೆಯಿಂದ ಕಡ್ಡಾಯ ನಿವೃತ್ತಿ"** ದಂಡನೆ ವಿಧಿಸಲು ಸರ್ಕಾರವು ನಿರ್ಣಯಿಸಿದೆ.

ಅದರಂತೆ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/395/ಗ್ರಾಪಂಕಾ/2017, ಬೆಂಗಳೂರು, ದಿನಾಂಕ:20-09-2019.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಸರ್ಕಾರವು, ಶ್ರೀ ನಟರಾಜ್.ಎ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಸಿ.ಕೆ.ಪುರ ಗ್ರಾಮ ಪಂಚಾಯಿತಿ, ಪಾವಗಡ ತಾಲ್ಲೂಕು, ತುಮಕೂರು ಜಿಲ್ಲೆ ಇವರಿಗೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957 ರ ನಿಯಮ 8 (vi) ರನ್ವಯ **"ಸೇವೆಯಿಂದ ಕಡ್ಡಾಯ ನಿವೃತ್ತಿಗೊಳಿಸುವ"** ದಂಡನೆ ವಿಧಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

20/9/19
(ಡಿ.ಜಿ. ನಾರಾಯಣ)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ, (ಗ್ರಾ.ಪಂ.)(ಪ್ರ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಗೆ,

1. ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು.
2. ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.

4. [illegible]

5. ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತಿ ಪಾವಗಡ, ತುಮಕೂರು ಜಿಲ್ಲ.

6. ಶ್ರೀ ನಟರಾಜು, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಸಿ.ಕೆ.ಪುರ ಗ್ರಾಮ ಪಂಚಾಯಿತಿ, ಪಾವಗಡ ತಾಲ್ಲೂಕು, ತುಮಕೂರು ಜಿಲ್ಲೆ.

7. ಗಣಕ ಕೋಶ.

8. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.